ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ01-07-2026 ರಂದು ಬೊಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಸರ್ವೆ ನಂ 98/2 ರಲ್ಲಿ 37 ಗುಂಟೆ ವಿಸ್ತೀರ್ಣದ ಚತುರ್ಗಡಿಗೆ ಯಾರು ಅತಿಕ್ರಮ ಪ್ರವೇಶ ಮಾಡಬಾರದು ಎಂದು ಈ ದಾವೆ ಸಲ್ಲಿಸಿರುತ್ತೇನೆ. ಸರ್ವೆ ನಂ 98/2 ರ ಪೂರ್ವ ಭಾಗಕ್ಕೆ ಪ್ರತಿವಾದಿಯರ ಜಮೀನು ಇರುತ್ತದೆ. ಸರ್ವೆ ನಂ 98/2 ರ ಕ್ಷೇತ್ರ 37 ಗುಂಟೆ ಜಮೀನನ್ನು ನಾನು ದಿಃ 24-09-2015 ರಂದು ಖರೀದಿ ಮಾಡಿರುತ್ತೇನೆ. ಸದರಿ ಜಮೀನನ್ನು ನಾನು ಗಜಾನನ ರಾಮಯ್ಯ ಹೆಗಡೆ ರವರ ಬಳಿ ಖರೀದಿ ಮಾಡಿರುತ್ತೇನೆ. ಸದರಿ ಗಜಾನನ ರಾಮಯ್ಯ ಹೆಗಡೆ ರವರು ಪ್ರತಿವಾದಿ ಕುಟುಂಬದ ಸದಸ್ಯರಾಗಿರುತ್ತಾರೆ ಎಂದರೆ ಸರಿ.

ಸರ್ವೆ ನಂ 98/2 ರಲ್ಲಿ 37 ಗುಂಟೆ ಜಮೀನನ್ನು ನೀವು ಖರೀದಿ ಮಾಡುವ ಕಾಲಕ್ಕೆ ಸದರಿ ಜಮೀನು ಹದ್ದು ಬಸ್ತ ಆಗಿ ಗಡಿ ನಿರ್ಧಾರ ಆಗಿರುತ್ತದೆಯಾ ಎನ್ನುವ ಬಗ್ಗೆ ತಿಳಿದುಕೊಂಡಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದುನುಡಿಯುತ್ತಾರೆ . ಸಾಕ್ಷಿಯು ಮುಂದರೆದು ದಿಃ 08-05-2015 ರಂದು ಎ. ಡಿ. ಎಲ್. ಆರ್. ರವರಿಗೆ ಅರ್ಜಿಯನ್ನು ನೀಡಿ ಸರ್ವೆ ನಕಾಶೆಯನ್ನು ತೆಗೆದುಕೊಂಡಿರುತ್ತೇನೆ. ಸದರಿ ನಕಾಶೆಯು ನಾನು ಖರೀದಿ ಮಾಡುವ ಪೂರ್ವದಲ್ಲಿ ಪಡೆದುಕೊಂಡಿರುವ ನಕಾಶೆ ಆಗಿರುತ್ತದೆ. ಪ್ರತಿವಾದಿಯರು ಅವರ ಸ್ವತ್ತಿಗೆ ಸಂಬಂದಿಸಿದಂತೆ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 46/2020 ರಂತೆ ಹಕ್ಕು ಘೋಷಣೆಗಾಗಿ ನನ್ನ ಹಾಗೂ ನನ್ನ ತಂದೆಯ ವಿರುದ್ದ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ.

ಸರ್ವೆ ನಂ 98/2 ರಲ್ಲಿ 37 ಗುಂಟೆ ಜಮೀನನ್ನು ನೀವು ಖರೀದಿ ಮಾಡಿದ ನಂತರ ಹದಬಸ್ತಗಾಗಿ ಅರ್ಜಿಯನ್ನೆನಾದರೂ ನೀಡಿರುತ್ತೀರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ದಿಃ 17-10-2019 ರಂದು ಅರ್ಜಿಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ಸರ್ವೆ ನಂ 98/2 ಹಾಗೂ ಸರ್ವೆ ನಂ 95 ಕ್ಕೆ ಸಂಬಂದಿಸಿದಂತೆ ಪ್ರತಿವಾದಿಯರ ಕುಟುಂಬದ ನಡುವೆ ವಿವಾದ ಇರುವ ಬಗ್ಗೆ ನಿಮಗೇನಾದರೂ ತಿಳಿದಿರುತ್ತದೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ದಿಃ 08-05-2015 ರಂದು ನಾನು ಪಡೆದುಕೊಂಡಿರುವ ನಕಾಶೆ ಹಾಗೂ 2019 ರಲ್ಲಿ ಆಗಿರುವ ಹದಬಸ್ತನ ನಕಾಶೆಯ ಬಗ್ಗೆ ನಿಮಗೆ ಮಾಹಿತಿ ಇರುತ್ತದೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಮೇಲಿನ ನಾಕಶೆಗಳಿಗೆ ಸಂಬಂದಿಸಿದಂತೆ ಕಂದಾಯ ಇಲಾಖೆಯಲ್ಲಿ ಯಾವುದಾದರೂ ಪ್ರಕರಣ ದಾಖಲಾಗಿರುತ್ತದೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ದಿಃ 17-10-2019 ರಂದು 1 ನೇ ಪ್ರತಿವಾದಿ ನಕಾಶೆಗೆ ಸಂಬಂದಿಸಿಂದತೆ ಕಂದಾಯ ಇಲಾಖೆಯಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ.

ಪ್ರತಿವಾದಿಯರು ಅಸಲು ದಾವಾ ಸಂಖ್ಯೆ 46/2020 ರಲ್ಲಿ ಮೇಲಿನ ಎರಡೂ ನಕಾಶೆಗಳನ್ನು ಅಸಿಂಧುಗೊಳಿಸಿ ಸರ್ವೆ ನಂ 95 ರಲ್ಲಿ 1 ಎಕರೆ 18 ಗುಂಟೆ ಜಮೀನಿಗೆ ಅವರೇ ವಾರಸುದಾರರು ಎಂದು ತೀರ್ಮಾನಿಸುವಂತೆ ಪರಿಹಾರವನ್ನು ಕೇಳಿರುತ್ತಾರೆ ಎಂದರೆ ಸರಿ. ಅದರಲ್ಲಿ ನಾನು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ.

ಸದರಿ ಪ್ರತಿವಾದ ಪತ್ರವನ್ನು ಸಲ್ಲಿಸಿದ ನಂತರ ನಾನು ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ.

ಅಸಲು ದಾವಾ ಸಂಖ್ಯೆ 46/2020 ರ ಯಾವುದೇ ಮಾಹಿತಿಯನ್ನು ನಾನು ಈ ದಾವೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿಯೂ ಸಹ ಅಸಲು ದಾವಾ ಸಂಖ್ಯೆ 46/2020 ರ ಮಾಹಿತಿಯನ್ನು ತಿಳಿಸಿರುವುದಿಲ್ಲ ಎಂದರೆ ಸರಿ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಸಾ.ಓ.ಹೇ.ಸ.ಒ

ಸಹಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ

ಸಿದ್ದಾಪುರ